# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಾರ್ಯಾಲಯ,
# ಪ್ರಾದೇಶಿಕ ಅರಣ್ಯ ವಿಭಾಗ, ಬೀದರ.

ಸಂ:ಎ1:ಬಿಜಿಟಿ:ಟೆಂಡರ್:ಸಿವಿಲ್:ಸಿಆರ್–18/2019–20 ದಿನಾಂಕ: 25–04–2019.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: 2019–20ನೇ ಸಾಲಿನಲ್ಲಿ ಸಿವಿಲ್ ಕಾಮಗಾರಿಗೆ ಟೆಂಡರ್ ಪ್ರಕಟಣೆ ಕುರಿತು.

0=0=0

ಈ ಮೂಲಕ ಬೀದರ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ 2019–20ನೇ ಸಾಲಿಗೆ ನೊಂದಾಯಿಸಲ್ಪಟ್ಟಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಾಣಿಸಿದ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಈ ಕಾಮಗಾರಿಯನ್ನು ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಅರಣ್ಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಷರತ್ತಿಗೊಳ್ಳಪಟ್ಟು ಕರೆಯಲಾಗಿದೆ. ಟೆಂಡರ್ ದಿನಾಂಕದ ವಿವರಗಳು ಈ ಕೆಳಗಿನಂತೆ ಇರುತ್ತವೆ.

| | | |
|---|---|---|
| 1 | ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ | ಈ ಕಛೇರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆಯ ದಿನಾಂಕದಿಂದ ದಿನಾಂಕ: 04–05–2019ರ ಅಪರಾಹ್ನ 1.30 ಗಂಟೆ ಒಳಗಾಗಿ ನೀಡಲಾಗುವುದು. |
| 2 | ಟೆಂಡರ ಫಾರಂಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ | ದಿನಾಂಕ: 06–05–2019 ರಂದು ಅಪರಾಹ್ನ 1.30 ಗಂಟೆ ಒಳಗಾಗಿ |
| 3 | ಟೆಂಡರ ತೆರೆಯುವ ದಿನಾಂಕ ಹಾಗೂ ಸಮಯ | ದಿನಾಂಕ: 08–05–2019 ರಂದು ಸಂಜೆ 3.00 ಗಂಟೆಯ ನಂತರ |
| 4 | ಮರು ಟೆಂಡರ್ ದಿನಾಂಕಗಳು (ಮರು ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ ಫಾರಂಗಳನ್ನು ಅದೇ ದಿವಸ ಅಪರಾಹ್ನ 1.30 ಗಂಟೆಯ ವರೆಗೆ ವಿತರಿಸಲಾಗುವುದು ಹಾಗೂ ಅದೇ ದಿನ 3.30 ಗಂಟೆ ಒಳಗಾಗಿ ಟೆಂಡರ್ ಫಾರಂಗಳನ್ನು ಬಾಕ್ಸನಲ್ಲಿ ಹಾಕಬೇಕಾಗುತ್ತದೆ) | ದಿನಾಂಕ: 06–05–2019 ರಂದು ಟೆಂಡರ ನಡೆಯದಿದ್ದಲ್ಲಿ ದಿನಾಂಕ: 10–05–2019 ರಂದು ಸಂಜೆ 4.00 ಗಂಟೆಗೆ 2ನೇ ಹಾಗೂ ಅಂತಿಮ ಟೆಂಡರ ಪ್ರಕ್ರಿಯೆಯನ್ನು ನಡೆಸಲಾಗುವುದು. |

ಟೆಂಡರ್‌ಗಳನ್ನು ಮೇಲೆ ನಮೂದಿಸಿದ ದಿನಾಂಕ ಹಾಗೂ ಸಮಯದ ಒಳಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಕೆ.ಇ.ಬಿ. ರಸ್ತೆ, ಬೀದರ–585401 ರವರ ಕಾರ್ಯಾಲಯದಲ್ಲಿ ಸೀಲು ಮಾಡಿದ ಲಕೋಟೆಯ ಮೇಲೆ ಕಾಮಗಾರಿ ಹೆಸರು ನಮೂದಿಸಿ, ಈ ಕಾರ್ಯಾಲಯದಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು. ಟೆಂಡರ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

## ಅಲ್ಪಾವಧಿ ಟೆಂಡರ ಹಾಕುವ ಕಾಮಗಾರಿಗಳ ವಿವರ

| ಕ್ರ. ಸಂ | ವಲಯ | ಕಾಮಗಾರಿಯ ಸ್ಥಳ | ಕೆಲಸದ ವಿವರ | ಕೆಲಸದ ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ. | ಲೆಕ್ಕ ಶೀರ್ಷಿಕೆ |
|---|---|---|---|---|---|---|
| 1 | 2 | 3 | 5 | 6 | 7 | 8 |
| 1. | ಬೀದರ | ದೇವ ದೇವ ವನ ಶಾಹಾಪೂರ | Improvement to BT Road (0Mtr. to 200 Mtr.) of size 200x5x1= 1000 Sqm. As per Estimate works. | 492000/– | 24000/– | 2406-01-070-0-01-RBB-139-Major works |
| 2. | ಬಸವ ಕಲ್ಯಾಣ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ತ್ರಿಪೂರಾಂತ (ಬಸವಕಲ್ಯಾಣ) | Formation of Cobbles Stones 75mm thick inter lock shape walking path (BIT-1) of size 2x75x0.30x0.075=3.38 Cum. As per Estimate works. | 326000/– | 16300/– | 2406-01-101-2-83-AFNFA-139-Major works-(Tree Park) |
| 3. | ಬಸವ ಕಲ್ಯಾಣ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ತ್ರಿಪೂರಾಂತ (ಬಸವಕಲ್ಯಾಣ) | Formation of Cobbles Stones 75mm thick inter lock shape walking path (BIT-2) of size 2x75x0.30x0.075=3.38 Cum. As per Estimate works. | 326000/– | 16300/– | 2406-01-101-2-83-AFNFA-139-Major works-(Tree Park) |

| | | | | | | |
|---|---|---|---|---|---|---|
| 4. | ಬಸವ ಕಲ್ಯಾಣ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ತ್ರಿಪೂರಾಂತ (ಬಸವಕಲ್ಯಾಣ) | Formation of Cobbles Stones 75mm thick inter lock shape walking path (BIT-3) of size 2x75x0.30x0.075=3.38 Cum. As per Estimate works. | 326000/- | 16300/- | 2406-01-101-2-83-AFNFA-139-Major works-(Tree Park) |
| 5. | ಬಸವ ಕಲ್ಯಾಣ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ತ್ರಿಪೂರಾಂತ (ಬಸವಕಲ್ಯಾಣ) | Formation of Cobbles Stones 75mm thick inter lock shape walking path (BIT-4) of size 2x60x0.30x0.075=2.70 Cum. As per Estimate works. | 374000/- | 18700/- | 2406-01-101-2-83-AFNFA-139-Major works-(Tree Park) |
| 6. | ಬಸವ ಕಲ್ಯಾಣ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ತ್ರಿಪೂರಾಂತ (ಬಸವಕಲ್ಯಾಣ) | Formation of Cobbles Stones 75mm thick inter lock shape walking path (BIT-5) of size 2x60x0.30x0.075=2.70 Cum. As per Estimate works. | 374000/- | 18700/- | 2406-01-101-2-83-AFNFA-139-Major works-(Tree Park) |
| 7. | ಹುಮನಾ ಬಾದ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ಕಲ್ಲೂರು ರಸ್ತೆ (ಹುಮನಾಬಾದ) | Formation of Cobbles Stones 75mm thick inter lock shape walking path (BIT-1) of size 2x75x0.30x0.075=3.38 Cum. As per Estimate works. | 326000/- | 16300/- | 2406-01-101-2-83-AFNFA-139-Major works-(Tree Park) |
| 8. | ಹುಮನಾ ಬಾದ | ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನ್, ಕಲ್ಲೂರು ರಸ್ತೆ (ಹುಮನಾಬಾದ) | Formation of Cobbles Stones 75mm thick inter lock shape walking path (BIT-2) of size 2x85x0.30x0.075=3.83 Cum. As per Estimate works. | 370000/- | 18500/- | 2406-01-101-2-83-AFNFA-139-Major works-(Tree Park) |

ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯದಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು ಮತ್ತು ಸದರಿ ಟೆಂಡರ್‌ನಲ್ಲಿ ತಿದ್ದುಪಡಿ ಮಾಡುವ ಸಂಪೂರ್ಣ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. ಇ.ಎಂ.ಡಿ. ಮೊತ್ತವನ್ನು ರಾಷ್ಟ್ರೀಕೃತ ಅಥವಾ ಆರ್.ಬಿ.ಐ. ಅನುಮೋದಿತ ಬ್ಯಾಂಕಿನಿಂದ **"Deputy Conservator of Forests, Territorial Forest Division, Bidar" Payable at Bidar** ರವರ ಹೆಸರಿನಲ್ಲಿ ಇರುವುದನ್ನು ಸಲ್ಲಿಸತಕ್ಕದು.

ಷರತ್ತುಗಳು :-

1. ಬೀದರ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ 2019-20ನೇ ಸಾಲಿನಲ್ಲಿ ಹೆಸರು ನೋಂದಾಯಿಸಿರುವವರು ಮಾತ್ರ ಈ ಟೆಂಡರಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.
2. ಸದರಿ ಕಾಮಗಾರಿಗಳು ತಾತ್ಕಾಲಿಕವಾಗಿದ್ದು ಇಲಾಖೆಯಿಂದ ಅನುದಾನದ ಲಭ್ಯತೆಯ ಆಧಾರದಂತೆ ಕಾಮಗಾರಿಗೆ ಭರಿಸಿದ ವೆಚ್ಚ ಪಾವತಿಸಲಾಗುವುದು.
3. ನೋಂದಾಯಿತ ಗುತ್ತಿಗೆದಾರರು ಆದಾಯ ತೆರಿಗೆ ಪಾವತಿಸಿದ ದಾಖಲೆಯನ್ನು ಅವಶ್ಯವಾಗಿ ಟೆಂಡರ ಫಾರಂ ಜೊತೆ ಲಗತ್ತಿಸತಕ್ಕದ್ದು. ಲಗತ್ತಿಸದಿದ್ದಲ್ಲಿ ಟೆಂಡರ ರದ್ದುಗೊಳಿಸಲಾಗುವುದು.
4. ಈ ಕಾರ್ಯಾಲಯದಿಂದ ನೀಡಲಾದ ಟೆಂಡರ ಫಾರಂಗಳ ಹೊರತುಪಡಿಸಿ ಬೇರೆ ಯಾವುದೇ ಟೆಂಡರ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.
5. ಪ್ರತಿಯೊಂದು ಪ್ಯಾಕೇಜ/ಯೋಜನೆಯಡಿಯ ಕೆಲಸಗಳಿಗೆ ಪ್ರತ್ಯೇಕವಾಗಿ ಇ.ಎಂ.ಡಿ. ಮೊತ್ತದ ಡಿ.ಡಿ.ಯನ್ನು ಲಗತ್ತಿಸತಕ್ಕದ್ದು. ಒಂದು ವೇಳೆ ಟೆಂಡರದಾರರು ಒಂದಕ್ಕಿಂತ ಹೆಚ್ಚು ಕೆಲಸಕ್ಕೆ ಇ.ಎಂ.ಡಿ. ಮೊತ್ತದ ಒಂದೇ ಡಿಡಿಯನ್ನು ಸಲ್ಲಿಸಿದಲ್ಲಿ ಅವರ ಟೆಂಡರ ಭಾಗಶ: ಸ್ವೀಕೃತವಾದಲ್ಲಿ ಕೆಲಸ ಪೂರ್ಣಗೊಳ್ಳುವವರೆಗೆ ಪೂರ್ಣ ಮೊತ್ತದ ಡಿ.ಡಿ.ಯನ್ನು ಹಿಂದಿರುಗಿಸಲಾಗುವುದಿಲ್ಲ.
6. ಟೆಂಡರ ಸ್ವೀಕೃತವಾದ ನಂತರ ಅಥವಾ ಪೂರ್ವದಲ್ಲಿ ಯಾವುದೇ ಕಾರಣದಿಂದ ಇಲಾಖೆಯಿಂದ ಪೂರ್ಣ/ಭಾಗಶ: ಕಾಮಗಾರಿ ರದ್ದಾದಲ್ಲಿ ಇ.ಎಂ.ಡಿ. ಮೊತ್ತದ ಡಿ.ಡಿ.ಯನ್ನು ಮಾತ್ರ ವಾಪಸ ನೀಡಲಾಗುವುದು. ಅದಕ್ಕೆ ಯಾವುದೇ ಲಾಭಾಂಶವನ್ನು ನೀಡಲಾಗುವುದಿಲ್ಲ.
7. ಟೆಂಡರ ಕೆಲಸಗಳನ್ನು ವಲಯ ಅರಣ್ಯ ಅಧಿಕಾರಿಗಳ ತಾಂತ್ರಿಕ ಸಲಹೆ ಹಾಗೂ ನೀಡುವ ಮಾರ್ಗದರ್ಶನದ ಅನುಸಾರ ಮಾಡತಕ್ಕದ್ದು.
8. ಟೆಂಡರ ಫಾರಂನ ಬೆಲೆ ರೂ. 500.00 ಮತ್ತು ತೆರಿಗೆಗಳು ಪ್ರತ್ಯೇಕ ನಿಯಮದಂತೆ.
9. ಟೆಂಡರ ಕೆಲಸಗಳನ್ನು ಯಶಸ್ವಿಯಾದ ಗುತ್ತಿಗೆದಾರರು ಈ ಕಾರ್ಯಾಲಯದಿಂದ ಆದೇಶ ನೀಡಿದ 90 ದಿನಗಳೊಳಗಾಗಿ ಕೆಲಸ ಪೂರ್ತಿಗೊಳಿಸುವುದು.

10. ಕಾಮಗಾರಿ ಸ್ಥಳಗಳು ತಾತ್ಕಾಲಿಕವಾಗಿದ್ದು, ಅವುಗಳ ಸ್ಥಳ ಬದಲಾವಣೆಗಳಾಗುವ ಸಂಭವವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಕಾಮಗಾರಿಯ ಸ್ಥಳವನ್ನು ಆಯಾ ವಲಯದಲ್ಲಿಯೇ ಸ್ಥಳಾಂತರಿಸಲಾಗುವುದು. ಅದನ್ನು ಗುತ್ತಿಗೆದಾರರು ಒಪ್ಪಿಕೊಂಡು ಸೂಚಿಸಿದ ಸ್ಥಳದಲ್ಲಿ ಕಾಮಗಾರಿಯನ್ನು ಮಾಡಬೇಕು.
11. ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಹಂತದಲ್ಲಿ ಟೆಂಡರ ಪ್ರಕ್ರಿಯೆ ರದ್ದುಗೊಳಿಸಲಾಗುವುದು. ಅದಕ್ಕೂ ಯಾವುದೇ ಕಾರಣಗಳನ್ನು ನೀಡಲಾಗುವುದಿಲ್ಲ.
12. ಯಾವುದೇ ಕಾರಣಕ್ಕೂ 2ನೇ ಹಂತದ ಟೆಂಡರನ ಅಂತಿಮ ದಿನಾಂಕದಂದು ಟೆಂಡರ ಯಶಸ್ವಿ/ನಡೆಯದಿದ್ದಲ್ಲಿ ಮುಂದಿನ, ಅಂತಿಮ ತೀರ್ಮಾನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರು ಹೊಂದಿರುವರು ಹಾಗೂ ಹೆಚ್ಚಿನ ಕೆಲಸಗಳು ಇನ್ನು ಮಾಡಬೇಕಾದರೆ ಈಗ ಮಾಡಿದ ಟೆಂಡರನಲ್ಲಿ ಆಗಿರುವ ಟೆಂಡರ ದರದಲ್ಲಿ ಕೆಲಸ ಮಾಡಬೇಕಾಗುತ್ತದೆ.
13. ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ಪ್ರಥಮ/ದ್ವಿತೀಯ ದರ್ಜೆ ಗುತ್ತಿಗೆದಾರರಾಗಿ ಸದರಿ ಕಾರ್ಯ ನಿರ್ವಹಿಸಿರುವ ಅನುಭವ ಹೊಂದಿರಬೇಕು.
14. ಟೆಂಡರುದಾರರು ಟೆಂಡರ್ ಕಾಮಗಾರಿಗೆ ನಿಗಧಿಸಿದ ದರದ ಬದಲಾಗಿ ತಮ್ಮ ದರಗಳನ್ನು ಕೋರುವುದು ಆಕ್ಷೇಪಣೀಯವಾಗಿರುತ್ತದೆ.
15. ಟೆಂಡರನಲ್ಲಿ ಅರ್ಹರಾದ ಯಶಸ್ವಿ ಗುತ್ತಿಗೆದಾರರು ಕಾಮಗಾರಿ ಬಗ್ಗೆ 7 ದಿವಸಗಳಲ್ಲಿ ರೂ. 100=00 ಬೌಂಡ್ ಪೇಪರ್‌ದಲ್ಲಿ ಈ ಕೆಳಸಹಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
16. ನಿಗದಿಪಡಿಸಿದ ಸಮಯದಲ್ಲಿ ಸೂಚಿಸಿದ ಅರಣ್ಯ ಪ್ರದೇಶದಲ್ಲಿ ಕಾಮಗಾರಿಗಳನ್ನು ಪೂರ್ಣವಾಗಿ ಹಾಗೂ ಗುಣಮಟ್ಟದ ಕೆಲಸಗಳನ್ನು ನಿರ್ವಹಿಸತಕ್ಕದ್ದು.
17. ನಿರ್ವಹಿಸಿದ ಕೆಲಸಗಳನ್ನು ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಗಳಿಂದ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಚೆಕ್‌ಮೆಜರಮೆಂಟ್ ಆದ ಮೇಲೆಯೇ ಹಣ ಪಾವತಿಗಾಗಿ ಬಿಲ್ಲನ್ನು ಸಲ್ಲಿಸತಕ್ಕದ್ದು. ಸರ್ಕಾರದ ಸೂಚನೆ ಅನುಸಾರ ಬಿಲ್‌ನಲ್ಲಿ **CGST/SGST/IT** ಇತ್ಯಾಧಿ ತೆರಿಗೆಗಳನ್ನು ಕಡಿತಗೊಳಿಸಲಾಗುವುದು.
18. ಸದರಿ ಕೆಲಸಗಳಿಗೆ ಯಾವುದೇ ಮುಂಗಡ ಹಣ ನೀಡುವುದಿಲ್ಲ.
19. ಪ್ರತಿಯೊಂದು ಕೆಲಸಕ್ಕೆ ಇ.ಎಂ.ಡಿ. ಹಣವನ್ನು ಠೇವಣಿಯಾಗಿ ಇಡತಕ್ಕದ್ದು.
20. ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು ಅರ್ಧಕ್ಕೆ ಕೈಬಿಟ್ಟು ಹೋದಲ್ಲಿ ಅಂಥವರ ಇ.ಎಂ.ಡಿ. ಹಣವನ್ನು ಯಾವುದೇ ಸೂಚನೆ ಇಲ್ಲದೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
21. ತಾಂತ್ರಿಕ/ಆಡಳಿತದ ಯಾವುದೇ ನಿರ್ಧಾರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ತೀರ್ಮಾನ/ಆದೇಶ ಅಂತಿಮವಾಗಿರುತ್ತದೆ.
22. ಕೆಲಸಗಳನ್ನು ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಯವರು ಅಳವು ಮಾಪನ ಪುಸ್ತಕದಲ್ಲಿ ನಿಮ್ಮ ಸಮಕ್ಷಮ ಅಳತೆ ಮತ್ತು ಪ್ರಮಾಣಗಳನ್ನು ದಾಖಲಿಸಿದಾಗ ಗುತ್ತಿಗೆದಾರರು ಸಹಿ ಮಾಡುವುದು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ ಇವರ ಪರಿಶೀಲನೆ ಹಾಗೂ ಅಳತೆ ಮಾಪನ ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು.
23. ಯಾವುದೇ ತಕರಾರಿನ ಬಗ್ಗೆ ಬೀದರ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮನವಿ ಸಲ್ಲಿಸಬಹುದು. ಅವರ ಆದೇಶವು ಅಧೀನಾಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಪಾಲನಾರ್ಹವಾದುದು.
24. ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿಯಿಲ್ಲವಾದರೆ ಕಲಬುರಗಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.
25. ಕರ್ನಾಟಕ ಅರಣ್ಯ ಕಾಯ್ದೆ, ಕರ್ನಾಟಕ ಅರಣ್ಯ ಸಂಹಿತೆ, ಕರ್ನಾಟಕ ಅರಣ್ಯ ಮ್ಯಾನ್ಯುಯಲ್ ಹಾಗೂ ಸರ್ಕಾರಿ ಅಧಿಸೂಚನೆ, ಆದೇಶಗಳು ಮತ್ತು ಕಾಲಕಾಲಕ್ಕೆ ಇಲಾಖೆಯಿಂದ ನೀಡಿದ ಸುತ್ತೋಲೆ ಮೇರೆಗೆ ನಿರ್ದೇಶನದ ಪ್ರಕಾರ ಅರಣ್ಯ ಗುತ್ತಿಗೆದಾರರು ಕಾಮಗಾರಿಗಳನ್ನು ನಿರ್ವಹಿಸುವುದು.
26. ಟೆಂಡರನಲ್ಲಿ ಭಾಗವಹಿಸುವ ಗುತ್ತಿಗೆದಾರರು ಈ ಮುಂಚೆ ಯಾವುದೇ ಇಲಾಖೆಯಲ್ಲಿ ಕಪ್ಪು ಪಟ್ಟಿಯ ಹೆಸರಿನಲ್ಲಿ ಸೇರ್ಪಡೆಯಾಗಿರಬಾರದು.
27. ಮೇಲಿನ ಷರತ್ತುಗಳಲ್ಲದೇ ಹೆಚ್ಚುವರಿ ಅಗತ್ಯವೆನಿಸಿದ ಷರತ್ತುಗಳನ್ನು ಟೆಂಡರ ಸಮಯದಲ್ಲಿ ಲಿಖಿತ ಮೂಲಕ ತಿಳಿಸಲಾಗುವುದು.
28. ಇದು ಸಂಕ್ಷಿಪ್ತ ಟೆಂಡರ ಆಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿಯ ಕೆಲಸದ ಸಮಯದಲ್ಲಿ ಪಡೆಯಬಹುದು.
29. ಸದರಿ ಕಾಮಗಾರಿಗಳನ್ನು ಯಶಸ್ವಿ ಗುತ್ತಿಗೆದಾರರು ನಿರ್ವಹಿಸುವಾಗ ಯಾವುದೇ ಆಸ್ತಿ, ಪ್ರಾಣಹಾನಿ ಮತ್ತು ಕಾನೂನು ಬಾಹಿರವಾಗಿ ನಡೆದ ಘಟನೆಗಳಿಗೆ ಇಲಾಖೆಯು ಜವಾಬ್ದಾರರಾಗುವುದಿಲ್ಲ. ಇದಕ್ಕೆ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರು. ಸದರಿ ಕಾಮಗಾರಿಗಳು ಅರಣ್ಯ ಪ್ರದೇಶದಲ್ಲಿ ನಡೆಯುವುದರಿಂದ, ನಿಮ್ಮಿಂದ ಅಥವಾ ನಿಮ್ಮಿಂದ ನಿಯೋಜಿಸಿದ ವ್ಯಕ್ತಿಗಳಿಂದ ಅರಣ್ಯ ಅಪರಾಧವಾದಲ್ಲಿ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ವಿಭಾಗ, ಬೀದರ.

ಪ್ರತಿಯನ್ನು :-

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕಲಬುರಗಿ ವೃತ್ತ, ಕಲಬುರಗಿ ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ/ಸಾಮಾಜಿಕ ಅರಣ್ಯ ವಿಭಾಗ, ಕಲಬುರಗಿ, ಯಾದಗಿರಿ, ರಾಯಚೂರು, ಬೀದರ ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಟೆಂಡರ್ ಕುರಿತು ವ್ಯಾಪಕ ಪ್ರಚಾರಕ್ಕಾಗಿ ಕ್ರಮಕೈಗೊಳ್ಳಲು ಕೋರಲಾಗಿದೆ.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ, ಬೀದರ/ಬಸವಕಲ್ಯಾಣ ಇವರಿಗೆ ಮಾಹಿತಿಗಾಗಿ & ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.
4. ಈ ವಿಭಾಗದ ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ ಮಾಹಿತಿಗಾಗಿ & ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.
5. ಈ ವಿಭಾಗದಲ್ಲಿ 2019-20ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಿಣಿ ಹೊಂದಿರುವವರಿಗೆ.
6. ಈ ಕಛೇರಿಯ ಸೂಚನಾ ಫಲಕಕ್ಕೆ.